# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 107 (1079) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12.03.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಅಬಕಾರಿ ಇಲಾಖೆ ವತಿಯಿಂದ 2025-26 ನೇ ಸಾಲಿಗೆ ಸುಮಾರು 40,000 ಕೋಟಿ ರೂ.ಗಳ ಗುರಿಯನ್ನು ಹೊಂದಿದ್ದು, ಜನವರಿ-2026 ವೇಳೆಗೆ ಸುಮಾರು 33,000 ಕೋಟಿ ರೂ.ಗಳ ಅಂದಾಜು ಆದಾಯ ಗಳಿಸಿರುವುದು ನಿಜವೇ: ಇಲ್ಲವಾದಲ್ಲಿ ಇಲಾಖೆಯು ಗಳಿಸಿರುವ ವಾಸ್ತವಿಕ ಆದಾಯವೆಷ್ಟು; ಹೆಚ್ಚಿನ ಲೆವಿ ಹೊರತಾಗಿಯೂ ಮದ್ಯ ಮಾರಾಟದ ಪ್ರಮಾಣ ಯಾವ ಕಾರಣಗಳಿಂದಾಗಿ ಕುಸಿತ ಕಂಡಿದೆ; | ಹೌದು.<br><br>ಏಪ್ರಿಲ್-2025 ರಿಂದ ಜನವರಿ-2026 ಅಂತ್ಯಕ್ಕೆ ಇಲಾಖೆಯು ಗಳಿಸಿರುವ ಆದಾಯ **ರೂ. 33,370.54** ಕೋಟಿ ಆಗಿರುತ್ತದೆ. ಫೆಬ್ರುವರಿ-2026 ಅಂತ್ಯಕ್ಕೆ **ರೂ. 36,492.47** ಕೋಟಿಗಳಷ್ಟು ಆಗಿರುತ್ತದೆ.<br><br>ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದ್ದಲ್ಲಿ 2025-26 ನೇ ಸಾಲಿನ ಜನವರಿ ಅಂತ್ಯಕ್ಕೆ ಶೇ. **-0.68** ರಷ್ಟು ಹಾಗೂ ಫೆಬ್ರುವರಿ-2026 ರ ಅಂತ್ಯಕ್ಕೆ ಶೇ. **-0.51** ರಷ್ಟು ಅಲ್ಪ ಪ್ರಮಾಣದ ಮದ್ಯ ಮಾರಾಟ ಕುಸಿತ ಕಂಡಿದೆ. ಆಂಧ್ರಪ್ರದೇಶದ ನೂತನ ಅಬಕಾರಿ ನೀತಿಯಿಂದಾಗಿ ಆಂಧ್ರಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊರ ರಾಜ್ಯದ ಗ್ರಾಹಕರು ನಮ್ಮ ರಾಜ್ಯದ ಮದ್ಯವನ್ನು ಖರೀದಿಸಲು ಬರುವುದು ಕಡಿಮೆಯಾಗಿರುವುದರಿಂದ ಮದ್ಯ ಮಾರಾಟದಲ್ಲಿ ಕುಸಿತ ಉಂಟಾಗಿರುತ್ತದೆ.<br><br>ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದ್ದಲ್ಲಿ 2025-26 ನೇ ಸಾಲಿನ ಜನವರಿ ಅಂತ್ಯಕ್ಕೆ ಬಿಯರ್ ಮಾರಾಟ ಶೇ.14.59 ರಷ್ಟು ಕಡಿಮೆಯಾಗಿರುತ್ತದೆ. |

| | | |
|---|---|---|
| | | ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಠಿಯಿಂದಾಗಿ ಬಿಯರ್ ಮಾರಾಟದಲ್ಲಿ ಕುಸಿತ ಕಂಡಿದೆ.<br><br>ರಾಜ್ಯದಲ್ಲಿ ಹವಾಮಾನ ಬದಲಾವಣೆಯಿಂದಾಗಿ ಅತೀ ಹೆಚ್ಚು ಶೀತದ ವಾತಾವರಣ ಇದ್ದುದರಿಂದ ಬಿಯರ್ ಮಾರಾಟದಲ್ಲಿ ಕುಸಿತ ಉಂಟಾಗಿರುತ್ತದೆ. |
| (ಆ) | ಸರ್ಕಾರದ ವತಿಯಿಂದ ಪದೇ ಪದೇ ಮದ್ಯದ ಮೇಲೆ ತರಿಗೆಗಳನ್ನು ಹೆಚ್ಚಿಸುತ್ತಿರುವುದು ಮದ್ಯ ಮಾರಾಟದಲ್ಲಿ ನಿಧಾನಗತಿ ಕಂಡಿದ್ದು ನಿಜವೇ ಇದ್ದಲ್ಲಿ ಮದ್ಯ ಬೇಡಿಕೆಯಲ್ಲಿ ಮತ್ತಷ್ಟು ಕುಸಿಯುವುದನ್ನು ತಡೆಯಲು ಸರ್ಕಾರ 2026-27 ನೇ ಸಾಲಿನ ಆಯವ್ಯಯದಲ್ಲಿ ತೆರಿಗೆ ಹೆಚ್ಚಳವನ್ನು ನಿಲ್ಲಿಸುವುದೇ | ಪ್ರಸ್ತುತ ಚಾಲ್ತಿಯಲ್ಲಿರುವ ತೆರಿಗೆ ಪದ್ಧತಿಯನ್ನು ವಿಶ್ಲೇಷಿಸಿ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ಸೂಕ್ತ ಶಿಫಾರಸ್ಸು ಮಾಡಲು ಸರ್ಕಾರವು ಸಂಪನ್ಮೂಲ ಕ್ರೋಢೀಕರಣ ಸಮಿತಿ (Resource Mobilization Commitee) ಅನ್ನು ರಚಿಸಿರುತ್ತದೆ. ಸಂಪನ್ಮೂಲ ಕ್ರೋಢೀಕರಣ ಸಮಿತಿಯ ವರದಿಯು ಸ್ವೀಕೃತವಾದ ನಂತರ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| (ಇ) | ಗೋವಾದಿಂದ ನಕಲಿ ಮದ್ಯ ಮತ್ತು ಆಂಧ್ರಪ್ರದೇಶದಿಂದ "ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್) ಮಿಶ್ರಿತ ಮದ್ಯವನ್ನು ಬೆಳಗಾವಿ ಮತ್ತು ರಾಯಚೂರಿನಂತಹ ಜಿಲ್ಲೆಗಳಲ್ಲಿ ಒಳಹರಿವನ್ನು (inflow) ತಡೆಯಲು ಇಲಾಖೆಯ Special Task Force ಯಾವ ಕ್ರಮಗಳನ್ನು ಕೈಗೊಂಡಿದೆ. | **<u>ಗೋವಾ ರಾಜ್ಯದ ನಕಲಿ ಮದ್ಯ:</u>**<br><br>ಗೋವಾ ರಾಜ್ಯದ ಮದ್ಯವನ್ನು ಕರ್ನಾಟಕ ರಾಜ್ಯದೊಳಕ್ಕೆ ಅಕ್ರಮವಾಗಿ ಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿ ಇಲಾಖಾಧಿಕಾರಿಗಳು ತಮಗೆ ನಿಗದಿಪಡಿಸಿದ ವ್ಯಾಪ್ತಿ ಪ್ರದೇಶಗಳಲ್ಲಿ ನಿರಂತರವಾಗಿ ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ರಸ್ತೆಗಾವಲು ನಡೆಸಿ, ಗುಪ್ತ ಮಾಹಿತಿ ಸಂಗ್ರಹಿಸಿ ಮತ್ತು ಹಳೇ ಆರೋಪಿಗಳ ಮೇಲೆ ನಿಗಾ ಇಟ್ಟು, ಅಕ್ರಮವಾಗಿ ಗೋವಾ ಮದ್ಯ ಸಂಗ್ರಹಣೆ, ಮಾರಾಟ ಹಾಗೂ ಸಾಗಾಣಿಕೆಯಂತಹ ಅಕ್ರಮಗಳ ವಿರುದ್ಧ ದಾಳಿ ನಡೆಸಿ, ಅಕ್ರಮಗಳು ಕಂಡುಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. |

| | | |
|---|---|---|
| | | ಗೋವಾ ರಾಜ್ಯದಿಂದ ಮದ್ಯದ ಸಾಗಾಣಿಕೆಯಂತಹ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಅಬಕಾರಿ ಇಲಾಖೆಯಿಂದ ಗಡಿಭಾಗದಲ್ಲಿ 03 ಖಾಯಂ ಅಬಕಾರಿ ತನಿಖಾ ಠಾಣೆಗಳನ್ನು ಸ್ಥಾಪಿಸಿ, ಹೆದ್ದಾರಿಗಳಲ್ಲಿ ಹಾದು ಹೋಗುವ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಈ ತನಿಖಾ ಠಾಣೆಗಳಲ್ಲಿರುವ ಸಿಬ್ಬಂದಿಗಳನ್ನು 15 ದಿನಗಳಿಗೊಮ್ಮೆ Rotation Basis ಮೇಲೆ ಬದಲಾವಣೆ ಮಾಡಲಾಗುತ್ತದೆ. ಗೋವಾ ರಾಜ್ಯದಿಂದ ಬರುವ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಗಟ್ಟಲು ಗುಪ್ತ ಮಾಹಿತಿಯನ್ನು ಸಂಗ್ರಹಿಸಿ, ಪರಿಣಾಮಕಾರಿಯಾಗಿ ಜಾರಿ ಮತ್ತು ತನಿಖಾ ಕಾರ್ಯಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಖಾಯಂ ತನಿಖಾಠಾಣೆ**ಗಳಲ್ಲಿ ಗೋವಾ ರಾಜ್ಯ ಮದ್ಯದ ಸಾಗಾಣಿಕೆ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ (2023-24 ಮತ್ತು 2024-25 ಹಾಗೂ 2025-26 ನೇ ಸಾಲಿನ ಜುಲೈ ರಿಂದ ಫೆಬ್ರುವರಿ ಮಾಹೆವರೆಗೆ) ಒಟ್ಟು 123 ಜಾಮೀನಿಯವಲ್ಲದ (nonbailable) ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 77 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 61,184 ಲೀಟರ್ ಗೋವಾ ರಾಜ್ಯದ ಮದ್ಯ ಮತ್ತು 87 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ವಶಪಡಿಸಿಕೊಂಡ ವಸ್ತುಗಳ ಮೌಲ್ಯ ರೂ.13.68 ಕೋಟಿಗಳಾಗಿರುತ್ತದೆ. ತನಿಖಾಠಾಣೆ ವಾರು/ ವರ್ಷವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>**ಬೆಳಗಾವಿ ಜಿಲ್ಲಾ** ವ್ಯಾಪ್ತಿಯಲ್ಲಿ ಗೋವಾ ರಾಜ್ಯ ಮದ್ಯದ ಸಂಗ್ರಹಣೆ, ಮಾರಾಟ ಹಾಗೂ ಸಾಗಾಣಿಕೆ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ (2023-24 |

| | | |
|---|---|---|
| | | ಮತ್ತು 2024-25 ಹಾಗೂ 2025-26 ನೇ ಸಾಲಿನ ಜುಲೈ ರಿಂದ ಫೆಬ್ರುವರಿ ಮಾಹೆವರೆಗೆ) ಒಟ್ಟು 189 ಜಾಮೀನಿಯವಲ್ಲದ (nonbailable) ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 86 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 44,251 ಲೀಟರ್ ಗೋವಾ ರಾಜ್ಯದ ಮದ್ಯ ಮತ್ತು 81 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ವಶಪಡಿಸಿಕೊಂಡ ವಸ್ತುಗಳ ಮೌಲ್ಯ ರೂ.10.37 ಕೋಟಿಗಳಾಗಿರುತ್ತದೆ. ವರ್ಷವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಹೀಗೆ **ಖಾಯಂ ತನಿಖಾಠಾಣೆ ಮತ್ತು ಬೆಳಗಾವಿ ಜಿಲ್ಲಾ** ವ್ಯಾಪ್ತಿಯಲ್ಲಿ ಗೋವಾ ರಾಜ್ಯ ಮದ್ಯದ ಸಂಬಂಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 312 ಜಾಮೀನಿಯವಲ್ಲದ (nonbailable) ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಿ, 163 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 1,05,435 ಲೀಟರ್ ಗೋವಾ ರಾಜ್ಯದ ಮದ್ಯ ಮತ್ತು 168 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಖಾಯಂ ತನಿಖಾಠಾಣೆ ಮತ್ತು ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಗೋವಾ ರಾಜ್ಯ ಮದ್ಯದ ಸಂಬಂಧ ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ ರೂ.24.05 ಕೋಟಿಗಳಾಗಿರುತ್ತದೆ.<br><br>**"ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್)"**<br>ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಸೇಂದಿ ಉತ್ಪಾದನೆ, ಮಾರಾಟ ಮತ್ತು ಸೇವನೆಗೆ ಅವಕಾಶವಿರುವುದರಿಂದ ರಾಜ್ಯದೊಳಗೆ ಕಳ್ಳಸಾಗಾಣಿಕೆ ಮೂಲಕ ನುಸುಳದಂತೆ ಕಟ್ಟೆಚ್ಚರ ವಹಿಸಿ ಈ ರಾಜ್ಯಗಳಲ್ಲಿ ದೊರೆಯುವ "ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್) ಸೇಂದಿ |

| | | |
|---|---|---|
| | | /ರಾಸಾಯನಿಕ ಮಿಶ್ರಿತ ಕೃತಕ ಸೇಂದಿ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತಾಗಿ ಇಲಾಖೆಯಿಂದ ನಡೆಸಲಾಗುವ ಗ್ರಾಮ/ವಾರ್ಡ್ ಸಭೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.<br><br>ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಗಡಿಭಾಗದಲ್ಲಿನ ಜಿಲ್ಲೆಗಳ ಖಾಯಂ ತನಿಖಾ ಠಾಣೆಗಳಲ್ಲಿ ವಾಹನ ಹಾಗೂ ವ್ಯಕ್ತಿಗಳ ತಪಾಸಣೆ ಕೈಗೊಳ್ಳುವುದನ್ನು<br>ಚುರುಕುಗೊಳಿಸಲಾಗಿದೆ. ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಗಡಿಪ್ರದೇಶದಲ್ಲಿ ನಿಯಮಿತ ದಾಳಿ/ ಶೋಧನೆ, ರಸ್ತೆಗಸ್ತು, ರಸ್ತೆಗಾವಲು ಮತ್ತು ಪಹರೆಗಳನ್ನು ಕೈಗೊಳ್ಳುವ ಮುಖಾಂತರ ಜಿಲ್ಲೆಯೊಳಗೆ ಸೇಂದಿಯನ್ನು ಅಕ್ರಮವಾಗಿ ಕಳ್ಳಸಾಗಾಣಿಕೆ ತಡೆಯಲು ಕ್ರಮ ಕೈಗೊಳ್ಳಲಾಗಿದೆ.<br><br>ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕ್ಕಲು ಕ್ರಮವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಚರಣೆ ನಡೆಸಲಾಗುತ್ತಿದೆ.<br><br>ಕರ್ನಾಟಕ ಅಬಕಾರಿ ಕಾಯ್ದೆ, 1965 ರ ಕಲಂ 50 ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ಮಾಹಿತಿ ನೀಡಲು ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿರುತ್ತದೆ. |

| | | |
|---|---|---|
| | | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಲ್ಲಾ ಮಟ್ಟದ ಸ್ಥಾಯಿ ಸಮಿತಿ ಸಭೆಯಲ್ಲಿ ಕೃತಕ/ಕಲುಷಿತ ಸೇಂದಿ, ಕಳ್ಳಬಟ್ಟಿ ಸಾರಾಯಿ ಮತ್ತು ವಿಷಪೂರಿತ ಮದ್ಯವನ್ನು ನಿರ್ಮೂಲನೆ ಮಾಡುವ ಸಂಬಂಧ ಸಮಿತಿಯ ಸಭೆಗಳನ್ನು ಕಾಲಕಾಲಕ್ಕೆ ನಡೆಸಿ, ಸದರಿ ಸಭೆಗಳಲ್ಲಿ ಸಂಯೋಜಿತ ಜಾರಿ ಕ್ರಮಗಳು, ಪ್ರತಿಬಂಧಕ ಕ್ರಮಗಳು ಮತ್ತು ಅರಿವು ಸಂಬಂಧಿತ ಕಾರ್ಯತಂತ್ರಗಳನ್ನು ಇತರೆ ಕ್ಷೇತ್ರ ಇಲಾಖೆಗಳ ಸಹಯೋಗದೊಂದಿಗೆ ರೂಪಿಸಿಕೊಂಡು ಅದರನ್ವಯ ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>**"ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್)** ಮತ್ತು ಅಕ್ರಮ ಸೇಂದಿ ಸಾಗಾಣಿಕೆ/ಮಾರಾಟದ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ (2023-24 ಮತ್ತು 2024-25 ಹಾಗೂ 2025-26 ನೇ ಸಾಲಿನ ಜುಲೈ ರಿಂದ ಫೆಬ್ರುವರಿ ಮಾಹೆವರೆಗೆ) ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಗಡಿಭಾಗದಲ್ಲಿನ ಜಿಲ್ಲೆಗಳಲ್ಲಿ ಒಟ್ಟು 1,117 ಜಾಮೀನಿಯವಲ್ಲದ (nonbailable) ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 771 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 1,498.6 Kg ಸಿಹೆಚ್ ಪೌಡರ್, 42,927 ಲೀಟರ್ ಸೇಂದಿ ಮತ್ತು 609 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಜಿಲ್ಲಾವಾರು/ ವರ್ಷವಾರು ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br><br>ಮುಂದುವರೆದು, ಸೇಂದಿ ಪ್ರಕರಣಗಳಿಗೆ ಸಂಬಂಧಿಸಿದಂತೆ, ರಾಯಚೂರು ಜಿಲ್ಲೆಯಲ್ಲಿನ **ಓರ್ವ** ಆರೋಪಿಯನ್ನು ಮಂಡ್ಯ ಜಿಲ್ಲೆಯ |

| | | |
|---|---|---|
| | | ಮಳವಳ್ಳಿ ತಾಲ್ಲೂಕಿಗೆ **ಗಡಿಪಾರು ಮಾಡಲಾಗಿರುತ್ತದೆ** ಹಾಗೂ **08** ಆರೋಪಿಗಳ ವಿರುದ್ಧ **ಗೂಂಡಾ ಕಾಯ್ದೆಯಡಿ** ಕ್ರಮ ಜರುಗಿಸಲು ವಿಚಾರಣಾ ಹಂತದಲ್ಲಿರುತ್ತದೆ.<br><br>ಕಲಬುರಗಿ ಜಿಲ್ಲೆಯ ಚಿತ್ತಾಪುರ ವಲಯ ವ್ಯಾಪ್ತಿಯ **04** ಆರೋಪಿತರ ವಿರುದ್ಧ **ಗಡಿಪಾರು ಕಾಯ್ದೆಯಡಿಯಲ್ಲಿ** ಕ್ರಮಕ್ಕಾಗಿ ಸಹಾಯಕ ಆಯುಕ್ತರು, ಸೇಡಂ ಉಪ ವಿಭಾಗ ಇವರಿಗೆ ಪ್ರಸ್ತಾವನೆ ಸಲ್ಲಿಸಿದೆ. ಚಿಂಚೋಳಿ ವಲಯದಲ್ಲಿ **06** ಆರೋಪಿಗಳ ವಿರುದ್ಧ **ಪ್ರತಿಬಂಧಕ ಕ್ರಮ ಜರುಗಿಸಿದೆ**.<br><br>ಗೋವಾ ರಾಜ್ಯದ ಮದ್ಯ ಮತ್ತು "ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್), ಕೃತಕ/ ಕಲುಷಿತ ಸೇಂದಿ, ಕಳಭಟ್ಟಿ ಸಾರಾಯಿ ಮತ್ತು ವಿಷಪೂರಿತ ಮದ್ಯದ ಸಾಗಾಣಿಕೆ ಹಾಗೂ Non-Potable Spirit ನ ದುರ್ಬಳಕೆ ಹಾಗೂ ನಿಯಂತ್ರಣ ಕುರಿತಾಗಿ ವಿಭಾಗದ ಅಬಕಾರಿ ಜಂಟಿ ಆಯುಕ್ತರ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಿ, ಪಕ್ಕದ ಜಿಲ್ಲೆಯ ಸಿಬ್ಬಂದಿಗಳನ್ನು ನಿಯೋಜಿಸಿ ಸಾಮೂಹಿಕ ದಾಳಿಗಳನ್ನು ನಡೆಸಲಾಗುತ್ತಿದೆ.<br><br>ಇಲಾಖಾ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕಾಲಕಾಲಕ್ಕೆ ಜಿಲ್ಲಾಮಟ್ಟದಲ್ಲಿ ಸಭೆಗಳನ್ನು ಕೈಗೊಂಡು ಈ ಅಕ್ರಮಗಳನ್ನು ಹತ್ತಿಕ್ಕಲು ಇಲಾಖೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. |

**ಎಫ್‌ಡಿ 31 ಇಎಲ್‌ಕ್ಯೂ 2026**

**(ಆರ್.ಬಿ.ತಿಮ್ಮಾಪೂರ)**
**ಅಬಕಾರಿ ಸಚಿವರು**

# ಅನುಬಂಧ-1

## ಗೋವಾ ರಾಜ್ಯದ ಗಡಿ ಭಾಗದಲ್ಲಿರುವ ಖಾಯಂ ತನಿಖಾ ಠಾಣೆಗಳಲ್ಲಿ ಕಳೆದ 03 ವರ್ಷಗಳಲ್ಲಿ (ಜುಲೈ ರಿಂದ ಜೂನ್ ವರೆಗೆ) ದಾಖಲಿಸಿರುವ ಪ್ರಕರಣಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ವಿವರ.

| ಕ್ರ.ಸಂ. | ಚೆಕ್ ಪೋಸ್ಟ್ | ಅಬಕಾರಿ ವರ್ಷ (ಜುಲೈ ರಿಂದ ಜೂನ್ ವರೆಗೆ) | ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿಗೊಳಪಡಿಸಿದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳು | | | | | | ಒಟ್ಟು ಮೌಲ್ಯ (ಲಕ್ಷ ರೂಗಳಲ್ಲಿ) |
|---|---|---|---|---|---|---|---|---|---|---|---|
| | | | | | Liquor | | NDPS | | Vehicles | | |
| | | | | | Qty in Ltr's | Value in Lakhs | Qty in Kg's | Value in Lakhs. | Qty in No's | Value in Lakhs. | |
| 1 | ಕನಕುಂಬಿ ತನಿಖಾ ಠಾಣೆ, ಖಾನಾಪುರ ತಾಲ್ಲೂಕು, ಬೆಳಗಾವಿ ದಕ್ಷಿಣ ಜಿಲ್ಲೆ | 2022-23 | 13 | 4 | 14093 | 56.37 | 0 | 0 | 7 | 38.50 | 94.87 |
| | | 2023-24 | 25 | 8 | 2895 | 57.42 | 0.5 | 0.25 | 11 | 155.50 | 213.17 |
| | | 2024-25 | 9 | 0 | 7932 | 163.15 | 0 | 0 | 7 | 137.00 | 300.15 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 6 | 0 | 681 | 3.61 | 0 | 0 | 5 | 24.50 | 28.11 |
| ಒಟ್ಟು | | | **53** | **12** | **25601** | **280.55** | **0.5** | **0.25** | **30** | **355.50** | **636.30** |
| 2 | ಮಾಜಾಳಿ ತನಿಖಾ ಠಾಣೆ, ಕಾರವಾರ, ಉತ್ತರ ಕನ್ನಡ ಜಿಲ್ಲೆ | 2022-23 | 9 | 11 | 435 | 4.59 | 0 | 0 | 9 | 129.00 | 133.59 |
| | | 2023-24 | 9 | 9 | 31272 | 30.06 | 0 | 0 | 9 | 115.15 | 145.21 |
| | | 2024-25 | 11 | 9 | 360 | 3.75 | 0 | 0 | 8 | 43.38 | 47.13 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 1 | 1 | 121 | 2.11 | 0 | 0 | 0 | 0.00 | 2.11 |
| | | | **30** | **30** | **32188** | **40.50** | **0** | **0** | **26** | **287.53** | **328.03** |
| 3 | ಅನಮೋಡ ತನಿಖಾ ಠಾಣೆ, ಅನಮೋಡ, ಜೊಯಿಡಾ, ಉತ್ತರ ಕನ್ನಡ ಜಿಲ್ಲೆ | 2022-23 | 19 | 21 | 2142 | 45.17 | 0 | 0 | 17 | 182.50 | 227.67 |
| | | 2023-24 | 9 | 7 | 596 | 7.97 | 0 | 0 | 7 | 44.50 | 52.47 |
| | | 2024-25 | 9 | 6 | 561 | 7.38 | 0 | 0 | 6 | 111.00 | 118.38 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 3 | 1 | 96 | 0.83 | 0 | 0 | 1 | 4.50 | 5.33 |
| ಒಟ್ಟು | | | **40** | **35** | **3395** | **61.35** | **0** | **0** | **31** | **342.50** | **403.85** |
| 03 ಖಾಯಂ ತನಿಖಾ ಠಾಣೆಗಳ ಒಟ್ಟು ವಿವರ | | | **123** | **77** | **61184** | **382.40** | **0.5** | **0.25** | **87** | **985.53** | **1368.18** |

ಅಇ 31 ಇಎಲ್‌ಕ್ಯೂ 2026

## ಅನುಬಂಧ-2

**ಬೆಳಗಾವಿ ಜಿಲ್ಲೆ**ಯಲ್ಲಿ ಗೋವಾ ರಾಜ್ಯದ ಮದ್ಯದ ಸಂಗ್ರಹಣೆ, ಮಾರಾಟ ಹಾಗೂ ಸಾಗಾಣಿಕೆ ವಿರುದ್ಧ ಕಳೆದ 03 ವರ್ಷಗಳಲ್ಲಿ (ಜುಲೈ ರಿಂದ ಜೂನ್ ವರೆಗೆ) ದಾಖಲಿಸಿರುವ ಪ್ರಕರಣಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ವಿವರ

| ಜಿಲ್ಲೆ | ಅಬಕಾರಿ ಸಾಲು (ಜುಲೈ ರಿಂದ ಜೂನ್ ಮಾಹೆವರೆಗೆ) | ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿ ಗೊಳಪಡಿಸಿದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳು | | | | ಒಟ್ಟು ಮೌಲ್ಯ (ಲಕ್ಷ ರೂಗಳಲ್ಲಿ) |
|---|---|---|---|---|---|---|---|---|
| | | | | Liquor | | Vehicles | | |
| | | | | Qty in Ltr's | Value in Lakhs. | Qty in No's | Value in Lakhs. | |
| ಬೆಳಗಾವಿ (ಉತ್ತರ) ಜಿಲ್ಲೆ | 2022-23 | 11 | 13 | 2520 | 3.10 | 9 | 75.10 | 78.20 |
| | 2023-24 | 7 | 8 | 62 | 0.25 | 4 | 36.50 | 36.75 |
| | 2024-25 | 6 | 6 | 48 | 0.18 | 2 | 15.00 | 15.18 |
| | 2025-26 (ಜುಲೈ ರಿಂದ ಫೆಬ್ರವರಿ ಮಾಹೆವರೆಗೆ) | 4 | 3 | 44 | 0.13 | 2 | 0.15 | 0.28 |
| **ಒಟ್ಟು** | | **28** | **30** | **2674** | **3.66** | **17** | **126.75** | **130.41** |
| ಬೆಳಗಾವಿ (ದಕ್ಷಿಣ) ಜಿಲ್ಲೆ | 2022-23 | 31 | 13 | 18937 | 151.50 | 10 | 58.10 | 209.60 |
| | 2023-24 | 57 | 19 | 10839 | 128.96 | 19 | 213.80 | 342.76 |
| | 2024-25 | 38 | 9 | 8873 | 69.66 | 22 | 183.30 | 252.97 |
| | 2025-26 (ಜುಲೈ ರಿಂದ ಫೆಬ್ರವರಿ ಮಾಹೆವರೆಗೆ) | 35 | 15 | 2928 | 23.42 | 13 | 78.75 | 102.18 |
| **ಒಟ್ಟು** | | **161** | **56** | **41578** | **373.54** | **64** | **533.95** | **907.50** |
| **ಬೆಳಗಾವಿ ಜಿಲ್ಲೆಯ ಒಟ್ಟು** | | **189** | **86** | **44251** | **377.20** | **81** | **660.70** | **1037.91** |

**ಆಇ 31 ಇಎಲ್‌ಕ್ಯೂ 2026**

## ಅನುಬಂಧ-3

CH Powder ಮತ್ತು ಸೇಂಧಿ ಗೆ ಸಂಬಂಧಿಸಿದಂತೆ ಕಳೆದ 03 ವರ್ಷಗಳಲ್ಲಿ (ಜುಲೈ ರಿಂದ ಜೂನ್ ವರೆಗೆ) ದಾಖಲಿಸಿರುವ ಪ್ರಕರಣಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ವಿವರ.

| ಕ್ರ.ಸಂ. | ಜಿಲ್ಲೆ | ಅಬಕಾರಿ ವರ್ಷ (ಜುಲೈ ರಿಂದ ಜೂನ್ ವರೆಗೆ) | ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿಗೊಳಪಡಿಸಿದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳು | | | | | | ಒಟ್ಟು ಮೌಲ್ಯ (ಲಕ್ಷ ರೂಗಳಲ್ಲಿ) |
|---|---|---|---|---|---|---|---|---|---|---|---|
| | | | | | CH Powder | | Toddy | | Vehicles | | |
| | | | | | Qty in Kg's | Value in Lakhs | Qty in Ltr's | Value in Lakhs | Qty in No's | Value in Lakhs | |
| 1 | ರಾಯಚೂರು | 2022-23 | 62 | 0 | 913.0 | 9.32 | 3725 | 1.83 | 14 | 15.7 | 26.80 |
| | | 2023-24 | 72 | 0 | 88.3 | 1.07 | 4192 | 2.09 | 16 | 9.2 | 12.36 |
| | | 2024-25 | 89 | 2 | 22.3 | 0.89 | 6873 | 3.37 | 34 | 24.1 | 28.38 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 45 | 0 | 9.8 | 0.10 | 2115 | 1.08 | 23 | 12.2 | 13.33 |
| **ಒಟ್ಟು** | | | **268** | **2** | **1033.3** | **11.38** | **16905** | **8.37** | **87** | **61.1** | **80.87** |
| 2 | ಬಳ್ಳಾರಿ | 2022-23 | 28 | 40 | 0.0 | 0.00 | 277 | 0.14 | 27 | 19.6 | 19.75 |
| | | 2023-24 | 37 | 41 | 0.0 | 0.00 | 463 | 0.23 | 31 | 12.4 | 12.67 |
| | | 2024-25 | 75 | 79 | 0.0 | 0.00 | 951 | 0.48 | 62 | 39.1 | 39.55 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 46 | 52 | 0.0 | 0.00 | 630 | 0.32 | 41 | 23.2 | 23.52 |
| **ಒಟ್ಟು** | | | **186** | **212** | **0.0** | **0.00** | **2321** | **1.17** | **161** | **94.3** | **95.49** |
| 3 | ಚಿತ್ರದುರ್ಗ | 2022-23 | 4 | 4 | 0.0 | 0.00 | 143 | 0.10 | 2 | 0.8 | 0.90 |
| | | 2023-24 | 2 | 2 | 0.0 | 0.00 | 111 | 0.05 | 1 | 0.4 | 0.45 |
| | | 2024-25 | 22 | 34 | 0.0 | 0.00 | 435 | 0.27 | 18 | 14.0 | 14.27 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 22 | 31 | 1.9 | 0.00 | 357 | 0.20 | 18 | 18.8 | 18.98 |
| **ಒಟ್ಟು** | | | **50** | **71** | **1.9** | **0.00** | **1046** | **0.62** | **39** | **34.0** | **34.60** |
| 4 | ಕಲಬುರಗಿ | 2022-23 | 61 | 50 | 16.0 | 0.14 | 2296 | 0.46 | 10 | 1.8 | 2.42 |
| | | 2023-24 | 57 | 48 | 190.0 | 1.91 | 2424 | 0.35 | 15 | 15.9 | 18.20 |
| | | 2024-25 | 41 | 16 | 3.9 | 0.04 | 2021 | 0.30 | 3 | 1.0 | 1.34 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 41 | 18 | 128.4 | 1.35 | 2666 | 0.40 | 2 | 1.4 | 3.15 |
| **ಒಟ್ಟು** | | | **200** | **132** | **338.3** | **3.44** | **9407** | **1.52** | **30** | **20.2** | **25.12** |
| 5 | ಯಾದಗಿರಿ | 2022-23 | 58 | 63 | 12.5 | 0.38 | 2088 | 0.42 | 24 | 15.6 | 16.39 |
| | | 2023-24 | 27 | 30 | 27.6 | 0.83 | 1486 | 0.30 | 10 | 8.1 | 9.18 |
| | | 2024-25 | 19 | 25 | 18.0 | 0.54 | 1149 | 0.23 | 5 | 3.1 | 3.82 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 14 | 16 | 50.0 | 1.50 | 651.5 | 0.13 | 6 | 3.3 | 4.93 |
| **ಒಟ್ಟು** | | | **118** | **134** | **108.1** | **3.24** | **5374.5** | **1.07** | **45** | **30.0** | **34.32** |
| 6 | ಬೀದರ್ | 2022-23 | 34 | 40 | 17.0 | 0.02 | 807.4 | 0.76 | 18 | 13.5 | 14.28 |
| | | 2023-24 | 36 | 41 | 0.0 | 0.00 | 620 | 0.49 | 26 | 22.0 | 22.46 |
| | | 2024-25 | 27 | 27 | 0.0 | 0.00 | 578.5 | 0.54 | 20 | 11.4 | 11.97 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 28 | 34 | 0.0 | 0.00 | 392 | 0.38 | 24 | 29.6 | 29.98 |
| **ಒಟ್ಟು** | | | **125** | **142** | **17.0** | **0.02** | **2397.9** | **2.17** | **88** | **76.5** | **78.68** |
| 7 | ತುಮಕೂರು | 2022-23 | 18 | 21 | 0.0 | 0.00 | 294 | 0.26 | 13 | 12.3 | 12.51 |
| | | 2023-24 | 11 | 12 | 0.0 | 0.00 | 367 | 0.18 | 9 | 5.3 | 5.43 |
| | | 2024-25 | 32 | 19 | 0.0 | 0.00 | 1636 | 1.55 | 18 | 19.9 | 21.48 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 20 | 17 | 0.0 | 0.00 | 369.72 | 0.38 | 14 | 8.6 | 8.98 |
| **ಒಟ್ಟು** | | | **81** | **69** | **0.0** | **0.00** | **2666.72** | **2.38** | **54** | **46.0** | **48.41** |
| 8 | ಚಿಕ್ಕಬಳ್ಳಾಪುರ | 2022-23 | 43 | 2 | 0.0 | 0.00 | 667 | 2.78 | 40 | 18.5 | 21.23 |
| | | 2023-24 | 38 | 5 | 0.0 | 0.00 | 1104 | 5.63 | 31 | 11.6 | 17.18 |
| | | 2024-25 | 33 | 1 | 0.0 | 0.00 | 489.5 | 0.28 | 19 | 23.4 | 23.68 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 34 | 0 | 0.0 | 0.00 | 519.5 | 0.28 | 15 | 14.7 | 14.98 |
| **ಒಟ್ಟು** | | | **148** | **8** | **0.0** | **0.00** | **2780** | **8.97** | **105** | **68.1** | **77.07** |
| 9 | ಕೋಲಾರ | 2022-23 | 0 | 0 | 0.0 | 0.00 | 0 | 0.00 | 0 | 0.0 | 0.00 |
| | | 2023-24 | 0 | 0 | 0.0 | 0.00 | 0 | 0.00 | 0 | 0.0 | 0.00 |
| | | 2024-25 | 1 | 1 | 0.0 | 0.00 | 29 | 0.03 | 0 | 0.0 | 0.03 |
| | | 2025-26 (ಜುಲೈ ರಿಂದ ಫೆಬ್ರವರಿ ವರೆಗೆ) | 0 | 0 | 0.0 | 0.00 | 0 | 0.00 | 0 | 0.0 | 0.00 |
| **ಒಟ್ಟು** | | | **1** | **1** | **0.0** | **0.00** | **29** | **0.03** | **0** | **0.0** | **0.03** |
| **ಮೇಲಿನ ಎಲ್ಲಾ ಜಿಲ್ಲೆಗಳ ಒಟ್ಟು** | | | **1177** | **771** | **1498.61** | **18.08** | **42927.12** | **26.29** | **609** | **430.21** | **474.57** |